ಶ್ರೀ ಡಿ.ಬಿ. ಚಂದ್ರೇಗೌಡ: ಇದು ಬಹಳ ಹಿಂದೆಯೇ ತಂದಿರತಕ್ಕಂಥ ಬಿಲ್. ಆದ್ದರಿಂದ ಸ್ವಲ್ಪ ವೆರಿಫೈ ಮಾಡಿ ನಾಳೆ ಇದನ್ನು ತೆಗೆದುಕೊಳ್ಳೋಣ. Let me make it very clear. That is why, we will take it tomorrow.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ನನ್ನ ಒಂದೇ ಒಂದು ಪ್ರಶ್ನೆ ಏನೆಂದರೆ ನಾವು ಇಲ್ಲಿ ಗೃಹರಕ್ಷಕದಳ ಕುರಿತಂತೆ ಯೋಚನೆ ಮಾಡುತ್ತಿದ್ದೇವೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಇದೇರೀತಿ ಕೆಲಸ ಮಾಡಿ ಸಹಾಯ ಮಾಡುತ್ತಿರುವಂಥ ಗ್ರಾಮ ದಳಪತಿಗಳು ಇದ್ದಾರೆ. ಅವರು ಯಾವ ಸ್ಥಿತಿಯಲ್ಲಿದ್ದಾರೆ ಎನ್ನುವುದು ಸರ್ಕಾರದ ಗಮನದಲ್ಲಿದೆ. ಅವರು ನಮಗೆಲ್ಲಾ ಅಗತ್ಯತೆಗಳನ್ನು ಪೂರೈಸುವುದಕ್ಕೆ, ಅವರ ಸೇವೆಯನ್ನು ಸಲ್ಲಿಸುವುದಕ್ಕೆ ಅವರು ನಮಗೆ ಸದಾ ಸಹಾಯ ಮಾಡುತ್ತಾ ಇರುತ್ತಾರೆ. ಬರೇ ಸರ್ಕಾರದ ಕಾರ್ಯಕ್ರಮಗಳಲ್ಲ, ಬೇರೆಬೇರೆ ಸಂಘಸಂಸ್ಥೆಗಳು, ಬೇರೆಬೇರೆ ಧಾರ್ಮಿಕ ಅಥವಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವಾಗ ಅವರು ತಮ್ಮ ಪ್ರಾಮಾಣಿಕವಾದಂಥ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಇವತ್ತು ಈ ಗ್ರಾಮ ದಳಪತಿಗಳು ಯಾವ ಸ್ಥಿತಿಯಲ್ಲಿ ಇದ್ದಾರೆ ಎಂದರೆ, ಅವರಿಗೆ ನಿಮ್ಮ ಎಸ್.ಪಿ.ಗಳು ಒಂದು ಐಡೆಂಟಿಟಿ ಕಾರ್ಡನ್ನೂ ಕೊಡುವುದಿಲ್ಲ. ಅವರು ನಾವು ಸೇವೆ ಮಾಡುತ್ತೇವೆ, ನಮಗೆ ಒಂದು ಐಡೆಂಟಿಟಿ ಕಾರ್ಡು ಕೊಡಿ ಎಂದರೆ ಕೊಡುತ್ತಿಲ್ಲ. ಅವರನ್ನು ಇಷ್ಟು ನಿರ್ಲಕ್ಷ್ಯ ಮಾಡಿ ಅವರ ಬಗ್ಗೆ ಯಾವುದೇ ಗಮನವಿಲ್ಲದೆ ಇರುವಂಥ ಸ್ಥಿತಿ ಇದೆ. ಅವರ ಬೇಡಿಕೆಗಳು ಬೇರೆಬೇರೆಯಾಗಿ ಅನೇಕ ಇವೆ. ನಾನು ಅದನ್ನೆಲ್ಲ ಇಲ್ಲಿ ವಿಸ್ತೃತವಾಗಿ ಇಲ್ಲಿ ಪ್ರಸ್ತಾಪಿಸುವುದಿಲ್ಲ. ಹಾಗಾಗಿ ಗ್ರಾಮ ದಳಪತಿಗಳ ಬಗ್ಗೆ ಸರ್ಕಾರ ಇದೇರೀತಿಯಾದಂಥ ಚಿಂತನೆಯನ್ನು ಮಾಡಿ, ಏನು ಅವರು ಈ ಕೆಲಸ ನಿರ್ವಹಿಸುತ್ತಿದ್ದಾರೆ, ಅದರ ಬಗ್ಗೆ ಕೂಡ ವಿಶೇಷವಾದ ಗಮನವನ್ನು ಕೊಡಬೇಕು ಮತ್ತು ಸಂಬಂಧಪಟ್ಟವರಿಗೆ ಐಡೆಂಟಿಟಿ ಕಾರ್ಡುಗಳನ್ನು ಕೊಡುವುದು, ಅವರು ಬೇರೆಬೇರೆ ತಮ್ಮ ಚಟುವಟಿಕೆಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡುವುದು ಮತ್ತು ಇದಕ್ಕೆ ಪೂರಕವಾದಂಥ ಒಂದು ಧ್ವನಿ ಸರ್ಕಾರದಿಂದ ಬರಬೇಕು. ಎನ್ನುವಂಥ ವಿನಂತಿಯನ್ನು ನಾನು ಮಾಡುತ್ತಿದ್ದೇನೆ.

ಶ್ರೀ ರಾಜಾ ಅಮರೇಶ್ವರ ನಾಯಕ: ಈಗ ಗೃಹರಕ್ಷಕ ದಳಕ್ಕೆ ಸಂಬಂಧಪಟ್ಟಂತೆ ವಿಚಾರಗಳನ್ನು ನಾವು ಇಲ್ಲಿ ಹೇಳಬೇಕಾಗುತ್ತದೆ. ತಾವು ಪ್ರಸ್ತಾಪ ಮಾಡಿರತಕ್ಕಂಥ ವಿಚಾರಗಳೆಲ್ಲವನ್ನೂ ಕೂಡ ಗಮನಿಸಿ ನಾಳೆ ಮತ್ತೊಮ್ಮೆ ತಂದಾಗ ಅವುಗಳ ಬಗ್ಗೆ ಮತ್ತೊಮ್ಮೆ ನಾನು ಹೇಳುತ್ತೇನೆ.

ಉಪಾಧ್ಯಕ್ಷರು: ಇದನ್ನು ನಾಳೆ ತೆಗೆದುಕೊಳ್ಳೋಣ.

(ಆ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕ, 2002 ಪರ್ಯಾಲೋಚನಾ ಪ್ರಸ್ತಾವ

+ಪ್ರೊ: ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಪ್ರೊ: ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯಸಚಿವರು): ಇವತ್ತು ಬಹಳ ಮುಖ್ಯವಾಗಿ ಎಸ್.ಎಸ್.ಎಲ್.ಸಿ. ಎಕ್ಸಾಮಿನೇಶನ್ ಬೋರ್ಡ್ ಅಥವಾ ಮಂಡಳಿ ಏನಿದೆ, ಅದಕ್ಕೆ ಹೊಸದಾಗಿ ವಿಭಾಗೀಯ ಕಾರ್ಯದರ್ಶಿಗಳು ಏನಿದ್ದಾರೆ, ಅವರು ಪದನಿಮಿತ್ತ ಜಂಟಿ ನಿರ್ದೇಶಕರೂ ಕೂಡ ಆಗಿದ್ದಾರೆ. ಈಗ ಮಂಡಳಿಯಲ್ಲಿ ಅವರು ಸದಸ್ಯರಾಗಿಲ್ಲ. ಅದನ್ನು ಮಾಡಿದರೆ ಪರೀಕ್ಷೆಗೆ ಸಂಬಂಧಪಟ್ಟಂತೆ ಹಲವಾರು ದಾಖಲೆಗಳನ್ನು ಕೊಡುವುದು ಇದೆಲ್ಲಾ ಮಾಡಬಹುದು. ಅದು ಬೋರ್ಡಿನ ಪರವಾಗಿ ಅವರು ಮಾಡಬೇಕಾಗುತ್ತದೆ. ಆದರೆ ಅದನ್ನು ಮಾಡಬೇಕಾದರೆ ಅವರು ಮಂಡಳಿಯ ಸದಸ್ಯರಾಗಿರ ಬೇಕಾಗುತ್ತದೆ. ಈಗ ಅವರು ಹಾಲಿ ಸದಸ್ಯರಲ್ಲ. ಅವರನ್ನು ಈ ಡೆಫಿನಿಶನ್‌ಗೆ ಸೇರಿಸಿ ಜಾಯಿಂಟ್ ಸೆಕ್ರೆಟರಿ ಮತ್ತು ಎಕ್ಸ್ ಅಫೀಶಿಯೋ ಡೈರೆಕ್ಟರ್ ಅಂತ ಏನು ಅಲ್ಲಲ್ಲಿ ವಿಭಾಗದಲ್ಲಿ ಇದ್ದಾರೆ ಅವರನ್ನು 'ಸದಸ್ಯರು' ಅಂತ ಮಾಡಿದರೆ ಆ ಕೆಲಸವನ್ನು ಅವರು ಮಂಡಳಿಯ ಪರವಾಗಿ ನಿರ್ವಹಿಸುತ್ತಾರೆ. ಇದರಲ್ಲಿ ಇರುವುದು ಅಷ್ಟೇ ಹೊರತು ಬೇರೆ ಏನೂ ಇಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ): ಎರಡು ಅಂಶಗಳನ್ನು ತಾವು ತಿಳಿಸಿದ್ದೀರಿ. ಒಂದು, ಸಂಯುಕ್ತ ಕಿರಿಯ ಕಾಲೇಜನ್ನು ಮಾನ್ಯತೆ ಪಡೆದ ಪ್ರೌಢಶಾಲೆಗಳ ಅರ್ಥವ್ಯಾಪ್ತಿಯಲ್ಲಿ ಸೇರಿಸಲು - it will become part of the high school. ಆಮೇಲೆ ಇನ್ನೊಂದು, ನಿರ್ದೇಶಕರ ಪೋಸ್ಟ್ ಬಗ್ಗೆ ಇದೆ. ಈಗ ಸಂಯುಕ್ತ ಕಿರಿಯ ಕಾಲೇಜನ್ನು ಮಾನ್ಯತೆ ಪಡೆದ ಪ್ರೌಢ ಶಾಲೆಯ ಅರ್ಥವ್ಯಾಪ್ತಿಯಲ್ಲಿ ಸೇರಿಸುವುದು ಎಂದರೆ, ಈಗ ಕಂಪೋಸಿಟ್ ಜ್ಯೂನಿಯರ್ ಕಾಲೇಜು ಎಂದು ತಾವು ಹೇಳಿದಿರಿ. ಕಂಪೋಸಿಟ್ ಜ್ಯೂನಿಯರ್ ಕಾಲೇಜ್ ಎಂದರೆ ಕಾಲೇಜ್ ಎಂದರೆ ಅದು ಹೈಸ್ಕೂಲ್ ಮತ್ತು ಕಾಲೇಜು ಒಂದೇ ಕಡೆ ಇರುವುದಿಲ್ಲ. What will happen to those PUC classes? ಪಿ.ಯು.ಸಿ. ವರ್ಗ ಆ ಕಾಲೇಜಿನಲ್ಲಿ ಇರುತ್ತದೆ ಉದಾಹರಣೆಗೆ ಈಗ ಎಂ.ಇ.ಎಸ್. ಕಾಲೇಜನ್ನು ತೆಗೆದುಕೊಳ್ಳಿ. ಅಲ್ಲಿ ಪಿ.ಯು.ಸಿ. ಮತ್ತು ಕಾಲೇಜು ಇದೆ. ಆ ಪಿ.ಯು.ಸಿ. ಯನ್ನು ಈ ಹೈಸ್ಕೂಲ್ ಒಳಗಡೆ ಸೇರಿಸುವುದಕ್ಕೆ ಬರುವುದಿಲ್ಲ. ಅದನ್ನು ಸೆಕೆಂಡರಿ ಎಜ್ಯುಕೇಶನ್ ಒಳಗೆ ಕೂಡ ಸೇರಿಸಲಿಕ್ಕೆ ಬರುವುದಿಲ್ಲ. ಹಾಗಾದರೆ ಅವರ ಪರಿಸ್ಥಿತಿ ಹೇಗೆ ಇರುತ್ತದೆ? Then what will be there status?

ಪ್ರೊ: ಬಿ.ಕೆ. ಚಂದ್ರಶೇಖರ್: ಅದರಲ್ಲಿ ನಮಗೇನೂ ಆಡಳಿತಾತ್ಮಕವಾದಂಥ ತೊಂದರೆ ಕಂಡುಬಂದಿಲ್ಲ. ಈ ವ್ಯವಸ್ಥೆ ಇದೆ. ಇಲ್ಲಿ ಮೂರು ಅಂಶಗಳು ಇವೆ. ಬಹಳ ಮುಖ್ಯವಾದುದು ಎಂದು ನಾನು ಅದನ್ನು ಹೇಳಿದೆ. ಕಡೆಯದು ಪಿ.ಯು.ಸಿ. ಬಗ್ಗೆ ಕೂಡ ಇದೆ. ನಮಗೆ ತೊಂದರೆ ಇದ್ದದ್ದು ಈ ಮಧ್ಯದಲ್ಲಿ ಇರುವುದು. ಯಾರು ಈ ಜಂಟಿ ನಿರ್ದೇಶಕರುಗಳು ಇದ್ದಾರಲ್ಲಾ, ಪದನಿಮಿತ್ತ ಜಂಟಿ ನಿರ್ದೇಶಕರೂ ಇರುತ್ತಾರೆ. ಅವರನ್ನು ಸದಸ್ಯರನ್ನಾಗಿ ಸೇರಿಸದೇ ಇದ್ದುದ್ದರಿಂದ ತೊಂದರೆಯಾಗಿದೆ. ಅದು ಬಿಟ್ಟರೆ ಬಾಕಿ ಯಾವುದರಲ್ಲೂ ಕೂಡ ನಮಗೆ ಇದುವರೆಗೆ ತೊಂದರೆ ಕಂಡುಬಂದಿಲ್ಲ. ಆ ಮನ್ನಣೆ ಪಡೆದ ಪ್ರೌಢಶಾಲೆಯ ಅರ್ಥವ್ಯಾಪ್ತಿಯಲ್ಲಿ ಈ ಸಂಯುಕ್ತ ಪದವಿ ಕಾಲೇಜನ್ನು ಸೇರಿಸಿದರೆ ಅಲ್ಲಿ ಸಮಸ್ಯೆ ಇರುವುದಿಲ್ಲವೆಂದು ಆಡಳಿತಾತ್ಮಕವಾಗಿ ಬಂದಿರತಕ್ಕಂಥ ವರದಿ ಇದು. ಅದರಲ್ಲಿ ಬೇರೆ ಏನಾದರೂ ತೊಂದರೆ ಇದ್ದರೆ ಅದನ್ನು ನಾವು ನಿವಾರಣೆ ಮಾಡಬಹುದು. ಅಲ್ಲಿ ಚರ್ಚೆಗೆ ಬಂದಾಗಲೂ ಈ ಪ್ರಶ್ನೆ ಬಂದಿತ್ತು. ನಿತ್ಯ ವ್ಯವಹಾರದಲ್ಲಿ ಯಾವ ತೊಂದರೆಯೂ ಇಲ್ಲವೆಂದು ಹೇಳಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್: ಹೈಸ್ಕೂಲ್‌ನಲ್ಲಿ ಜೂನಿಯರ್ ಕಾಲೇಜು ಇದೆ. ಅವರು ಪಾಪ, ಕಾಲೇಜು ಎಂದು ಹೇಳಿಕೊಂಡು ಓಡಾಡುತ್ತಾರೆ. ನೀವು ಈಗ ಅವರನ್ನು ಹೈಸ್ಕೂಲ್‌ಗೆ ಸೇರಿಸುತ್ತಿದ್ದೀರಿ. ಆ ಪಿ.ಯು.ಸಿ. ಅವರದ್ದು ಕಾಲೇಜು ಮತ್ತು ಈ ಪಿ.ಯು.ಸಿ. ಯವರದ್ದು ಹೈಸ್ಕೂಲ್. Will there not be contradiction?

ಪ್ರೊ: ಬಿ.ಕೆ. ಚಂದ್ರಶೇಖರ್: ಸಂಯುಕ್ತ ಪದವಿಪೂರ್ವ ಕಾಲೇಜು ಅಂತ ಕಲ್ಪನೆ ಇರುವುದೇ ಹಾಗೆ ಅಲ್ವಾ? ಮೂಲಭೂತ ಕಲ್ಪನೆಯೇ ಹಾಗಿರುವಾಗ ಅದಕ್ಕೇನೂ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಡಿ.ಎ. ಸದಾನಂದಗೌಡ: ಹಾಗಾದರೆ ಪಿ.ಯು.ಸಿ. ಬೋರ್ಡ್ ಏನಾಗುತ್ತದೆ? ಅದರ ಅಸ್ತಿತ್ವ ಏನು?

ಪ್ರೊ: ಬಿ.ಕೆ. ಚಂದ್ರಶೇಖರ್: ಪಿ.ಯು.ಸಿ. ಡೈರ್‌ಕ್ಟರೇಟ್ ಏನಿದೆ ಅದು ಪದವಿಪೂರ್ವ ಪರೀಕ್ಷೆ ಇವೆಯಲ್ಲಾ, 11 ಮತ್ತು 12ನ್ನು ಎಂದಿನಂತೆ ಮುಂದುವರೆಸಿಕೊಂಡು ಹೋಗುವುದು ಮತ್ತು ಪದವಿ ಪೂರ್ವ ಕಾಲೇಜಿನ ಆಡಳಿತವನ್ನು ನಿರ್ವಹಿಸುವುದು ಇರುತ್ತದೆ. ಈಗಲೂ ಅದನ್ನು ಮಾಡುತ್ತಿದ್ದೇವೆ. ಈ ಸಂಯುಕ್ತ ಪದವಿ ಪೂರ್ವ ಕಾಲೇಜು ಅಂತ ಇರುವ ಕಡೆ ಕೂಡ ಕಾಲೇಜಿಗೆ ಸಂಬಂಧಪಟ್ಟಿದ್ದನ್ನು ಪದವಿಪೂರ್ವ ಶಿಕ್ಷಣ ಡೈರೆಕ್ಟರೇಟ್‌ನವರೇ ನೋಡಿಕೊಳ್ಳುವುದು. ಹಾಗೆ ಅದು ನಡೆದುಕೊಂಡು ಹೋಗುತ್ತದೆ. ಇದು ಪರೀಕ್ಷಾ ದೃಷ್ಟಿಯಿಂದ ಮಾತ್ರ ಮಾಡುತ್ತಿರುವುದು. ಇದನ್ನು ಪ್ರತ್ಯೇಕ ಮಾಡುವ ಪ್ರಶ್ನೆ ಇಲ್ಲಿ ಬಂದಿಲ್ಲ. ಪರೀಕ್ಷೆಯನ್ನು ಕಂಡಕ್ಟ್ ಮಾಡುವುದಕ್ಕೆ ಎಸ್.ಎಸ್.ಎಲ್.ಸಿ. ಬೋರ್ಡ್‌ನಿಂದ ಪಿ.ಯು.ಸಿ. ಕಡೆಯಿಂದ ಮೆಂಬರ್‌ಗಳನ್ನು ನಾಮಿನೇಟ್ ಮಾಡುತ್ತಿದ್ದೇವೆ. ಈಗ ಏನು ಮಾಡುತ್ತಾರೆ ಎಂದರೆ ಡೈರೆಕ್ಟರ್ ಅವರು ಅಥವಾ ಅವರು ನಾಮಿನೇಟ್ ಮಾಡಿದ ಒಬ್ಬ ಅಧಿಕಾರಿ ಅದಕ್ಕೆ ಮೆಂಬರ್ ಆಗಿ ಬರುತ್ತಿದ್ದಾರೆ, ಅಷ್ಟೆ.

ಶ್ರೀ ಡಿ.ಎ. ಸದಾನಂದಗೌಡ: ಪಿ.ಯು.ಸಿ. ಯಲ್ಲಿರುವಂಥ ಸ್ಥಾನಮಾನ, ಅದು ಇಲ್ಲಿ ಜಂಟಿ ನಿರ್ದೇಶಕರು ಅಂತ ಇದ್ದರೂ ಕೂಡ ಅದಕ್ಕೆ ಏನೂ ಭಾದಕವಾಗುವುದಿಲ್ಲ ಎಂದು ಹೇಳಿದಿರಿ. ಅದು ಕಾಲೇಜಿನಲ್ಲಿ ಇರುವಂಥ ಪಿ.ಯು.ಸಿ. ಮತ್ತು ಹೈಸ್ಕೂಲ್‌ನಲ್ಲಿರುವುದಕ್ಕೆ ಜತೆಗೆ ಸೇರಿಸಿಕೊಂಡು ಮಾಡುವಾಗ, ಇದು ಬರೀ ಎಸ್.ಎಸ್.ಎಲ್.ಸಿ. ಪರೀಕ್ಷೆ ದೃಷ್ಟಿಯಿಂದ ಮಾತ್ರ, ಅದನ್ನು ಸರಿಪಡಿಸುವುದಕ್ಕೆ ಮಾತ್ರವೆಂದು ಹೇಳುತ್ತಿದ್ದೀರಿ ಅಲ್ಲವೆ?

ಪ್ರೊ: ಬಿ.ಕೆ. ಚಂದ್ರಶೇಖರ್: ಇದು ನೀಮಿತವಾದ ಒಂದು ತಿದ್ದುಪಡಿ ಅಷ್ಟೆ. ಬೇರೆ ಏನೂ ಇಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಫಸ್ಟ್‌ಗ್ರೇಡ್ ಕಾಲೇಜ್‌ನಲ್ಲಿ ಎಕ್ಸಿಸ್ಟೆಂಟ್ ಪಿ.ಯು.ಸಿ. ಕಾಲೇಜು ಏನಿರುತ್ತದೆ, ಅದು ಮುಂದುವರೆಯುತ್ತದೆಯಲ್ಲಾ.

ಪ್ರೊ: ಬಿ.ಕೆ. ಚಂದ್ರಶೇಖರ್: ಇದು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಸಂಬಂಧ ಪಟ್ಟಿರುವುದು ಬಿಟ್ಟರೆ ಅಕಾಡೆಮಿಕ್ ಆಗಿ ಪಿ.ಯು.ಸಿ. ಫಸ್ಟ್‌ಗ್ರೇಡ್ ಕಾಲೇಜಿನಲ್ಲಿರುವುದು, ಪಿ.ಯು.ಸಿ. ಹೈಸ್ಕೂಲ್ ಜೊತೆಯಲ್ಲಿ ಇರುವುದು ಅದೆಲ್ಲಾ ಹಾಗೆಯೇ ಮುಂದು ವರೆಯುತ್ತದೆ. ಅದಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ.

ಶ್ರೀ ಎಸ್. ಸುರೇಶಕುಮಾರ್: ನಾನು ಇದನ್ನು ಒಪ್ಪಿಕೊಳ್ಳುತ್ತಿದ್ದೆ. ನೀವು ಉದ್ದೇಶಗಳು ಮತ್ತು ಕಾರಣ ಹೇಳಿಕೆಯಲ್ಲಿ ಸಂಯುಕ್ತ ಕರಿಯ ಕಾಲೇಜನ್ನು ಮಾನ್ಯತೆ ಪಡೆದ ಪ್ರೌಢಶಾಲೆಯ

ಅರ್ಥವ್ಯಾಪ್ತಿಯಲ್ಲಿ ಸೇರಿಸಲು ಅಂತ ಹಾಕಿದ್ದೀರಿ. ಅದರ ಬದಲು ನೀವು ಈಗ ಹೇಳಿದ್ದನ್ನು ಹಾಕಿದ್ದರೆ ಇಷ್ಟು ಕನ್‌ಫ್ಯೂಶನ್ ಬರುತ್ತಾ ಇರಲಿಲ್ಲ. ಪ್ರೌಢಶಾಲೆ ವ್ಯಾಪ್ತಿಯಲ್ಲೇ ಆ ಪಿ.ಯು.ಸಿ. ಬರುವುದು ಮತ್ತು ಆ ಪಿ.ಯು.ಸಿ. ಕಾಲೇಜು ವ್ಯಾಪ್ತಿಯಲ್ಲಿ ಬರುವುದು. ಇದರಿಂದ ತೊಂದರೆ ಆಗುತ್ತಿದೆ ಎಂಬುದು ನಮ್ಮ ಅನಿಸಿಕೆ ಮತ್ತು ನಮ್ಮ ಕಳಕಳಿ.

ಪ್ರೊ: ಬಿ.ಕೆ. ಚಂದ್ರಶೇಖರ್: ನಾವು ಚೆಕ್ ಮಾಡಿದೆವು ಹೈಸ್ಕೂಲ್ ಸೆಕ್ಷನ್ ಮಾತ್ರ ಈ ಎಗ್ಜಾಮಿನೇಶನ್ ಬೋರ್ಡ್‌ಗೆ ಇಲ್ಲಿ ಬರುತ್ತದೆ ವಿನಹ: ಬೇರೆ ಅಂತಹ ಗೊಂದಲವೇನೂ ಬರುವುದಿಲ್ಲ. ಬಂದರೆ ನಾನು ಪುನ: ತಮ್ಮ ಮುಂದೆ ಬರುತ್ತೇನೆ. ಎಸ್.ಎಸ್.ಎಲ್.ಸಿ ಬೋರ್ಡ್ ಪರೀಕ್ಷೆಗೆ ತೊಂದರೆ ಇಲ್ಲ. ಅಷ್ಟು ಮಾತ್ರ ಮಾಡುತ್ತಿರುವುದು ಬೇರೆ ಏನೂ ಮುಟ್ಟುತ್ತಿಲ್ಲ ಇಲ್ಲ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಸುರೇಶ್‌ಕುಮಾರ್ ಅವರ ಕಾಳಜಿ ಎನೆಂದರೆ ಪಿ ಯು ಸಿ ಯಲ್ಲಿ ಕಲಿಯುವಂತಹವರು ಹೈಸ್ಕೂಲ್ ಜೊತೆ ಗಿದ್ದವರಿಗೆ ಸ್ವಲ್ಪ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್ ಬರಬಹುದೋ ಏನೋ, ನಾವೇನೋ ಹೈಸ್ಕೂಲ್‌ನಲ್ಲಿ ಇದ್ದೇವೆ ಅಂತ ಹೇಳಿ, ಕಾಲೇಜಿನಲ್ಲಿ ಕಲಿಯುವಂತಹ ಅದೇ ಪಿ ಯು ಸಿ ಯವರಿಗೆ ಮಾನಸಿಕವಾಗಿ ನಾವು ಕಾಲೇಜಿನಲ್ಲಿರುವವರು ಅಂತ ಏನಾದರೂ ಸ್ವಲ್ಪ ಡಿಸ್‌ಕ್ರಿಮಿನೇಶನ್ ಆಗುವ ರೀತಿಯಲ್ಲಿ ಅವರ ಮನಸ್ಸಿಗೆ ಬರಬಹುದೋ ಏನೋ ಎನ್ನುವಂತಹ ಒಂದು ಜಿಜ್ಞಾಸೆ.

ಪ್ರೊ. ಬಿ.ಕೆ. ಚಂದ್ರಶೇಖರ್: ಮಾನ್ಯ ಅಧ್ಯಕ್ಷರೇ ನಾನು ಹೇಳಿದ್ದೇನೆ. ಪುನ: ಅದನ್ನೇ ಹೇಳಬೇಕು. ಅಕ್ಯಾಡೆಮಿಕ್ ಆಗಿರುವಂತಹ ಪ್ರಶ್ನೆಯನ್ನು ನೀವು ಎತ್ತುತ್ತಿದ್ದೀರಿ. ನಾನು ಹೇಳುತ್ತಿರುವುದು ಸಂಪೂರ್ಣವಾಗಿ ಸೀಮಿತವಾಗಿ ಆಡಳಿತಾತ್ಮಕವಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆ ನಡೆಸುವುದಕ್ಕೆ ಬೇಕಾದ ವ್ಯವಸ್ಥೆ, ಪ್ಯೂರ್ ಡೆಫನೇಶನ್ ಏನು ಇದೆ ಅದನ್ನು ಚೇಂಜ್ ಮಾಡುವುದನ್ನು ಮಾತ್ರ ಹೇಳುತ್ತಿದ್ದೇನೆ. ಯಾರಿಗೂ ಯಾವ ತೊಂದರೆಯು ಇದರಿಂದ ಆಗುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ ನೀವು ನಿರ್ದೇಶಕರು ಪದವೀಪೂರ್ವ ಕಾಲೇಜಿನ ಶಿಕ್ಷಣ ಅಥವಾ ಅವರ ನಾಮ ನಿರ್ದೇಶಕ, ನಿರ್ದೇಶಕರು ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ನಿರ್ದೇಶಕರು ಪ್ರೌಢ ಶಿಕ್ಷಣ ಮತ್ತು ಇತರ ಪರೀಕ್ಷೆಗಳ ಮಂಡಳಿಯ ಪ್ರಭಾರದಲ್ಲಿರುವ ನಿರ್ದೇಶಕರು ಅಂತ ಮಾಡಿ ಆ ಮೊದಲನೇ ಸೆಂಟೆನ್ಸ್ ಬೇಡವಲ್ಲಾ ಆಗ. ಮೊದಲನೇ ಸೆಂಟೆನ್ಸ್ ಸಂಧಯುಕ್ತ ಕಿರಿಯ ಕಾಲೇಜನ್ನು ಮಾನ್ಯತೆ ಪಡೆದ ಪ್ರೌಢಶಾಲೆಯ ಅರ್ಥ ವ್ಯಾಪ್ತಿಯಲ್ಲಿ ಸೇರಿಸುವ, it will become redundant, ನಿಮಗೆ ಏನು ಬೇಕು? ಈಗ ಆಡಳಿತಾತ್ಮಕ ವ್ಯವಸ್ಥೆಗೋಸ್ಕರ ಒಂದು ಕಮಿಟಿ ಮಾಡುತ್ತೀರಿ, ಆ ಕಮಿಟಿಯಲ್ಲಿ ಇವರೆಲ್ಲಾ ಸೇರಬೇಕು ಎನ್ನುವುದು ನಿಮ್ಮ ಅಗತ್ಯತೆ, ನೀವು ಹೇಳುತ್ತಿರುವ ಅರ್ಥ. ಹಾಗಾದರೆ ಇದರ ಅಗತ್ಯವೇ ಇಲ್ಲ.

ಪ್ರೊ. ಬಿ.ಕೆ. ಚಂದ್ರಶೇಖರ್: ಅದರಲ್ಲಿ ತೊಂದರೆ ಎನು ಅಂತ ನೀವು ಹೇಳುತ್ತಿಲ್ಲ. ಈಗ ಮೊದಲನೇ ಸೆಂಟೆನ್ಸ್ ತಾವು ಓದಿದಿರಲ್ಲಾ ಇದರಲ್ಲಿ ಏನು ತೊಂದರೆ ಇದೆ? ಈ ಅಧಿನಿಯಮದ ಉಪಬಂಧಗಳು ಈ ರೀತಿ ಮನ್ನಣೆ ಪಡೆದ ಪ್ರೌಢಶಾಲೆಗಳಿಗೆ ಅನ್ವಯವಾಗುತ್ತದೆ. ಸಂಯುಕ್ತ ಕಿರಿಯ ಕಾಲೇಜುಗಳಲ್ಲೂ ಸಹ ಪ್ರೌಢ ಶಿಕ್ಷಣ ವಿಭಾಗ ಇದ್ದಾಗ್ಯೂ ಅದು ಮನ್ನಣೆ

ಪಡೆದ ಪ್ರೌಢಶಾಲೆಯ ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲವಾದ್ದರಿಂದ ಸಂಯುಕ್ತ ಕರಿಯ ಕಾಲೇಜಿನಲ್ಲಿಯೇ ನಡೆಸಲ್ಪಡುವ ಪ್ರೌಢ ಶಿಕ್ಷಣ ವಿಭಾಗವಿದ್ದು ಈ ಅಧಿನಿಯಮದ ಉಪಬಂಧದಲ್ಲಿ ಅನ್ವಯವಾಗುವುದಿಲ್ಲ ಅದನ್ನು ಅನ್ವಯಿಸುವುದಕ್ಕೆ ಕರಿಯ ಕಾಲೇಜನ್ನು ಸೇರಿಸುವುದಕ್ಕೆ for the purpose the examination. I don't know how it affects the status, image, reputation. ಎನೂ ಇಲ್ಲವಲ್ಲಾ, ಮಾನ್ಯ ಸೇರೇಶ್ ಕುಮಾರ್ ರವರೇ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ): ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸ್ಪಷ್ಟನೆ ಕೊಟ್ಟಿದ್ದಾರೆ. ಸಮಾಧಾನಕರವಾಗಿದೆ. ಆದರೆ ನಮಗೆ ಈ ಸಂಶಯಗಳು ಬರುವುದಕ್ಕೆ ಒಂದು ಕಾರಣವು ಇದೆ. ಏಕೆಂದರೆ ಸರ್ಕಾರ ಈಗಾಗಲೇ 7ನೇ ತರಗತಿಯ ಜೊತೆಗೆ 8ನೇ ತರಗತಿಯನ್ನು ಸೇರಿಸುತ್ತೇವೆ. 9ನೇ ತರಗತಿ ಮತ್ತು 10ನೇ ತರಗತಿಯನ್ನು ಮಾತ್ರ ಪ್ರೌಢ ಶಾಲೆಯಲ್ಲಿಡುತ್ತೇವೆ. ಅದರ ಜೊತೆಗೆ ಪಿ ಯು ಸಿ ಯನ್ನು ಸೇರಿಸುತ್ತೇವೆ ಈ ರೀತಿಯಾಗಿ ಅನೇಕ ಹೇಳಿಕೆಗಳನ್ನು ಕೊಟ್ಟಿದ್ದೀರಿ. ಹಾಗಾಗಿ ಮತ್ತೆ ಈ ರೀತಿಯ ಆದರೆ ಈ ಬಗ್ಗೆ ತಾವು ಸ್ಪಷ್ಟಪಡಿಸಿದ್ದೀರಿ ನಮಗೆ ಕ್ಲಿಯರ್ ಆಗಿದೆ. ಆದರೆ ಏಕೆ ಮತ್ತೆ ಈ ಗೊಂದಲಗಳು ಅಂದರೆ ಮತ್ತೆ ನೀವು 7ನೇ ತರಗತಿಯನ್ನು 8ನೇ ತರಗತಿಗೆ ಸೇರಿಸಿ 9ನೇ ತರಗತಿ ಮತ್ತು 10 ತರಗತಿಗೆ ಮಾತ್ರ ಹೈಸ್ಕೂಲ್ ಇಟ್ಟು ಮತ್ತೆ ಪಿ ಯು ಸಿ ಮೊದಲನೇ ವರ್ಷ, ಎರಡನೇ ವರ್ಷವನ್ನು ಮತ್ತೆ ಈ ಹೈಸ್ಕೂಲ್‌ಗೆ ಸೇರಿಸಬೇಕು ಅಂತ ಮುಂದೆ ಯೋಚನೆ ಮಾಡಿದರೆ, ಈ ರೀತಿಯ ಸಂಶಯಗಳು ಕೆಲವು ಇರುವುದರಿಂದ ಹೊರಗಡೆ ಈ ರೀತಿಯ ಅಭಿಪ್ರಾಯಗಳು ಇವೆ. ಸರ್ಕಾರ ಈ ರೀತಿ ಚಿಂತನೆ ಮಾಡುತ್ತಿದೆ, ಈ ರೀತಿಯ ಗೊಂದಲಗಳು ನಿರ್ಮಾಣವಾಗುತ್ತವೆ ಎನ್ನುವ ಅಭಿಪ್ರಾಯ ಇದೆ. ಇದೂ ಅಲ್ಲದೆ ಸರ್ಕಾರ ತಮಗೆ ಅನೇಕ ಹಂತದಲ್ಲಿ ಈಗ ನಮ್ಮ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ ಸರ್ಕಾರ, ಈ ಎಲ್ಲಾ ಅನುದಾನಗಳ ಕಡಿತಗಳ ಕುರಿತಂತೆ ಈಗಾಗಲೇ ಒಂದು ಚರ್ಚೆಯಾಗಿದೆ. ಅದರಲ್ಲಿ ಈ ಪ್ರೌಢ ಶಾಲೆಗಳದ್ದು ಇದೆ, ಕರಿಯ ಕಾಲೇಜುಗಳದ್ದು ಇದೆ, ಎಲ್ಲರದ್ದೂ ಇದೆ, ಆ ಬಗ್ಗೆ ನಾನು ವಿವರ ಕೇಳುವುದಕ್ಕೆ ಹೋಗುವುದಿಲ್ಲ, ಬೇರೆ ಸಂದರ್ಭದಲ್ಲಿ ಕೇಳುತ್ತೇನೆ. ಈ ರೀತಿ ಅನೇಕ ಸಂಶಯಗಳು ಉಂಟಾಗಿರುವುದರಿಂದ ಈ ವಾಕ್ಯದ ಬಗ್ಗೆ ಸಂಶಯ ಇರುವುದು. ಆದರೆ ತಾವು ಸ್ಪಷ್ಟಪಡಿಸಿದ್ದೀರಿ ಇದರಿಂದ ಏನೂ ತೊಂದರೆ ಯಾಗುವುದಿಲ್ಲ ಅಂತ, ಹಾಗಾಗಿ ನನ್ನ ಅಭಿಪ್ರಾಯವು ಕೂಡ ಯಾವುದೇ ಕಾರಣಕ್ಕೂ ಇನ್ನು ಮುಂದೆ ಅದರ ಇಂಟರ್‌ಪ್ರಿಟೇಶನ್‌ನಲ್ಲಿ ಆಗಲಿ ಅಥವಾ ಯಾವುದೇ ಸಂದರ್ಭದಲ್ಲಿ ಆಗಲಿ ಈಗ ಇರುವಂತಹ ವ್ಯವಸ್ಥೆಗೆ ತೊಂದರೆ ಬರದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಪ್ರೊ. ಬಿ.ಕೆ. ಚಂದ್ರಶೇಖರ್: ಈ ಡೆಫನೆಷನ್ ಸೆಕ್ಷನ್‌ನಲ್ಲಿ ಏನು ಇದೆ ಅಂದರೆ "Recognised High School means a high school, a higher secondary school, a multi-purpose high school or a junior technical school recognised by the Director of Public Instructions in Mysore or an officer authorised by him in this behalf."

ಅದಕ್ಕೆ ನಾವು ಏನು ಮಾಡುತ್ತಿದ್ದೇವೆಂದರೆ ಹೈಸ್ಕೂಲ್ ಸೆಕ್ಷನ್, ಪಿ.ಯು.ಕಾಲೇಜನ್ನು ಹೈಸ್ಕೂಲ್ ಸೆಕ್ಷನ್‌ಗೆ ಸೇರಿಸುತ್ತಿದ್ದೇವೆ. ಈ ಡೆಫನೆಷನ್‌ನಲ್ಲಿ ಬೇರೆ ಏನೂ ಇಲ್ಲ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 2002 ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 3ರವರೆಗೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ಖಂಡ 2 ರಿಂದ 3ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 3ರವರೆಗೆ ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುವುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಪ್ರೊ.ಬಿ.ಕೆ. ಚಂದ್ರಶೇಖರ್:~ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೇ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಇ) ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ವಿಧೇಯಕ, 2002.

ಪರ್ಯಾಲೋಚನಾ ಪ್ರಸ್ತಾವ

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ರ ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ನಾನು ಕೋರುತ್ತೇನೆ."